ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ಪತ್ರೆಗಳು

194(309); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚುತ್ತಿರುವ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ನಿರ್ವಹಣಾ ವ್ಯವಸ್ಥೆಯನ್ನು ಮಾಡುವಲ್ಲಿ ಇಲಾಖೆಯವರು ಕೈಗೊಂಡ ಕ್ರಮಗಳೇನು;

ಆ) ಇಂಟೆನ್ಸಿವ್ ಕೇರ್ ಯುನಿಟ್‌ಗಳನ್ನು ಸದರಿ ಆಸ್ಪತ್ರೆಗಳಲ್ಲಿ ಒದಗಿಸಿ ನಿರ್ವಹಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಸದರಿ ಆಸ್ಪತ್ರೆಗಳಲ್ಲಿ ಕೊರತೆ ಇರುವ ಸಿಬ್ಬಂದಿ ವರ್ಗದ ನೇಮಕಾತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹೆಚ್ಚುತ್ತಿರುವ ಮಹಾನಗರದ ಜನಸಂಖ್ಯೆ ಮತ್ತಿತರ ಕಾರಣಗಳಿಂದ ಬೇಡಿಕೆ ಹೆಚ್ಚಾಗಿರುವ ಐ.ಸಿ. ಯುನಿಟ್‌ಗಳನ್ನು ಹೆಚ್ಚಿಸಿ ಪ್ರಮಾಣದಲ್ಲಿ ವ್ಯವಸ್ಥೆಗೊಳಿಸಿ ನಿರ್ವಹಿಸುವಲ್ಲಿ ಸರ್ಕಾರರದ ಕ್ರಮಗಳೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚುತ್ತಿರುವ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ನಿರ್ವಹಣಾ ವ್ಯವಸ್ಥೆಯನ್ನು ಮಾಡಲು ಹಾಗೂ ಇನ್ನೂ ಹೆಚ್ಚಿನ ಜನಸಂಖ್ಯೆಗೆ ಆರೋಗ್ಯ ಸೇವೆ ನೀಡುವ ದೃಷ್ಟಿಯಿಂದ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ` 33.00 ಕೋಟಿ ರೂಗಳಲ್ಲಿ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಈ ಕೆಳಕಂಡಂತಿದೆ.

1) ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಬರುವ 70 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಔಷಧಿ ಮತ್ತು ಸಾದನ ಸಲಕರಣೆಗಳೊಂದಿಗೆ ಉನ್ನತೀಕರಿಸಲಾಗುವುದು ಹಾಗೂ ಅವುಗಳನ್ನು ಭಲಪಡಿಸಲು ಹೆಚ್ಚುವರಿಯಾಗಿ 297 ಕಿರಿಯ ಮಹಿಳಾ ಕಾರ್ಯಕರ್ತೆಯರು, 80 ಜನ ಶಿಶ್ರೂಷಣಾದಾದಿಯರು, 62 ಜನ ಔಷಧಿ ವಿತರಕರು

ಮತ್ತು 67 ಜನ ಪ್ರಯೋಗ ಶಾಲಾ ತಂತ್ರಜ್ಞರನ್ನು ನೇಮಿಸಿಕೊಳ್ಳಲಾಗವುದು.

2) ಆರೋಗ್ಯ ಸೇವೆ ವಂಚಿತವಾಗಿರುವ ಪ್ರದೇಶಗಳಾದ ಸ್ಲಂ ಪ್ರದೇಶ ಸಹಿತ ಹೊಸದಾಗಿ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

3) ಹಾಲಿ ಇರುವ 70 ಮತ್ತು ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಂಜೆ 4.30 ರಿಂದ ರಾತ್ರಿ 8.30ರ ವರೆಗೆ ಆರೋಗ್ಯ ಸೇವೆ ನೀಡಲು 80 ಜನ ವೈದ್ಯರನ್ನು ಹೆಚ್ಚುವರಿಯಾಗಿ ನೇಮಿಸಿಕೊಳ್ಳುವುದು.

4) ಹಾಲಿ ಇರುವ 6 ಸಮುದಾಯ ಆರೋಗ್ಯ ಕೇಂದ್ರಗಳನ್ನು ಹೈಟೆಕ್ ಪ್ರಯೋಗಾಲಯ, ಸಾಧನ ಸಲಕರಣೆ ಮತ್ತು ಸಿಬ್ಬಂದಿ ಸಹಿತ ಉನ್ನತೀಕರಿಸುವುದು.

5) 6 ಸಂಚಾರಿ ವೈದ್ಯಕೀಯ ಘಟಕಗಳನ್ನು ಪ್ರಾರಂಭಿಸಲಾಗುವುದು.

6) 35 ಜಾಗದಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಇರುವ ಹೆಲ್ತ್ ಕಿಯೋಸ್ಕ ಪ್ರಾರಂಭಿಸುವುದು.

ಆ) ಇಲಾಖೆಯ ಅಧೀನದಲ್ಲಿ ಬರುವ ಸಾರ್ವಜನಿಕ ಆಸ್ಪತ್ರೆಗಳಾದ ಕೆ.ಸಿ.ಜನರಲ್ ಮತ್ತು ಜಯನಗರ ಜನರಲ್ ಆಸ್ಪತ್ರೆಯಲ್ಲಿ 6 ಹಾಸಿಗೆಗಳುಳ್ಳ ಇಂಟೆನ್‌ಸಿವ್‌ಕೇರ್ ಯುನಿಟ್ ಈಗಾಗಲೇ ಸೇವೆಗೆ ಲಭ್ಯವಿದೆ. ಐ.ಸಿ.ಯುಗೆ ಅವಶ್ಯವಿರುವ ಕಾರ್ಡಿಯಾಕ್ ಮಾನಿಟರ್, ವೆಂಟಿಲೇಟರ್, ಕಾರ್ಡಿಯಾಕ್ ಡಿಫಿಬ್ರಿಲೇಟರ್ ಸಹಿತ ಎಲ್ಲಾ ಅವಶ್ಯ ಸಾಧನೆ ಸಲಕರಣೆಗಳಿದ್ದು, 5 ಜನ ಫಿಜಿಷಿಯನ್ ತಜ್ಞರು ಸಹ ಆಸ್ಪತ್ರೆಯಲ್ಲಿ ಲಭ್ಯವಿರುತ್ತಾರೆ.

ಇಂದಿರಾನಗರ ಸಾರ್ವಜನಿಕ ಆಸ್ಪತ್ರೆಯು ಒಂದು ವರ್ಷದಿಂದ ಹೊಸ ಕಟ್ಟಡಲ್ಲಿ ಕಾರ್ಯಾರಂಭಮಾಡುತ್ತಿದ್ದು, ಇಲ್ಲಿ ಹಾಲಿ ಐಸಿಯು. ಘಟಕ

ಇರುವುದಿಲ್ಲ. ಐ.ಸಿ.ಯು ಘಟಕ ಪ್ರಾರಂಭಿಸಲು ಸಾಧನೆ ಸಲಕರಣೆಗಳ ಖರೀದಿ ಪ್ರಕ್ರಿಯೇ ನಡೆಯುತ್ತಿದೆ. ಸಾಧನ ಸಲಕರಣೆಗಳು ಸರಬರಾಜು ಆದ ನಂತರ ಇಲ್ಲಿಯೂ ಸಹ ಐ.ಸಿ.ಯು ಘಟಕರ ಪ್ರಾರಂಭಿಸಲಾಗುವುದು.

ಜಯನಗರ ಜನರಲ್ ಆಸ್ಪತ್ರೆಯಲ್ಲಿ 47 ವೈದ್ಯರ ಹುದ್ದೆ ಮಂಜೂರಾಗಿದ್ದು, 43 ಹುದ್ದೆಗಳು ಭರ್ತಿಯಾಗಿದ್ದು, 3 ಹುದ್ದೆಗಳು ಖಾಲಿ ಇವೆ. ಹಾಗೂ 5 ಜನ ತಜ್ಞ ವೈದ್ಯರುಗಳು ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 47 ತಜ್ಞ ವೈದ್ಯರ ಹುದ್ದೆಯಲ್ಲಿ 30 ಜನ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಗುತ್ತಿಗೆ ಆಧಾರದಲ್ಲಿ 5 ತಜ್ಞ ವೈದ್ಯರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ತಜ್ಞ ವೈದ್ಯರುಗಳ ಹುದ್ದೆ ಭರ್ತಿ ಮತ್ತು ಸ್ಥಳಾವಕಾಶದ ಲಭ್ಯತೆ ನೋಡಿಕೊಂಡು ಈ ಇನ್ನೂ ಹೆಚ್ಚು ಐ.ಸಿ.ಯು. ಘಟಕಗಳನ್ನು ಸ್ಥಾಪಿಸಲು ಪರಿಶೀಲಿಸಲಾಗುವುದು.

ರಾಣೆಬೆನ್ನೂರಿನಲ್ಲಿ ಹೊಸದಾಗಿ ಎ.ಆರ್.ಟಿ.ಓ. ಆಫೀಸ್ ಪ್ರಾರಂಭಿಸುವುದು

195(147); ಶ್ರೀ ಕೋಳಿವಾಡ ಕೆ.ಬಿ. (ರಾಣೆಬೆನ್ನೂರು)

ಅ) ರಾಣೆಬೆನ್ನೂರಿನಲ್ಲಿ ಎ.ಆರ್.ಟಿ.ಓ. ಆಫೀಸನ್ನು ಪ್ರಾರಂಭಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ ಮತ್ತು ಎಂದಿನಿಂದ ಕಾರ್ಯಾರಂಭ ಮಾಡಲಿದೆ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)